**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 24 ಪಿಒಎಲ್ 76

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 5ನೇ ಜನವರಿ 1982.

**ಸುತ್ತೋಲೆ**

ವಿಷಯ :- ಆಡಳಿತ ಭಾಷೆಯಾಗಿ ಕನ್ನಡ ಬಳಕೆ - ಇಲಾಖಾ ತನಿಖಾ ವರದಿಯಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುತ್ತಿರುವ ಬಗ್ಗೆ ವರದಿ ಮಾಡಲು ಆದೇಶ.

ಉಲ್ಲೇಖ :-1. ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979.

2. ಸರ್ಕಾರದ ಅಧಿಕೃತ ಜ್ಞಾಪನ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979

3. ಸರ್ಕಾರದ ಸುತ್ತೋಲೆ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 4ನೇ ಡಿಸೆಂಬರ್ 1979.

4. ಭಾರತ ಸರ್ಕಾರದ ಗೃಹ ಮಂತ್ರಾಲಯದ ಪತ್ರ ಕ್ರಮಾಂಕ 12016/14/78 - ಒ.ಎಲ್ (ಬಿ2), ದಿನಾಂಕ 23ನೇ ಅಕ್ಟೋಬರ್ 1980.

ದಿನಾಂಕ 1ನೇ ನವೆಂಬರ್ 1979ರಿಂದ ರಾಜ್ಯಾದ್ಯಂತ ಎಲ್ಲ ಆಡಳಿತ ಮಟ್ಟದಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಬೇಕೆಂದು ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿ.ಪಿ.ಎ.ಆರ್. 79 ದಿನಾಂಕ 6ನೇ ಸೆಪ್ಟಂಬರ್ 1979ರಲ್ಲಿ ಆದೇಶಿಸಲಾಗಿದೆ. ಅಲ್ಲದೆ, ದಿನಾಂಕ 1ನೇ ನವೆಂಬರ್ 1979ರಿಂದ, ಒಂದು ವರ್ಷದವರೆಗೆ ''ರಾಜಭಾಷಾ ವರ್ಷ''ವನ್ನು ಆಚರಿಸಬೇಕೆಂದು ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ 6ನೇ ಸೆಪ್ಟಂಬರ್ 1979ರಂದು ಆದೇಶ ನೀಡಲಾಗಿತ್ತು. ಮುಖ್ಯ

ಕಾರ್ಯದರ್ಶಿಗಳವರ ಹಾಗೂ ಇಲಾಖಾ ಮುಖ್ಯಸ್ಥರ ಸಭೆಯ ನಿರ್ಣಯದಂತೆ ಕನ್ನಡವನ್ನು ಆಡಳಿತ ಭಾಷೆಯಾಗಿ ತರುವಲ್ಲಿ ಹಾಗೂ ''ರಾಜಭಾಷಾ ವರ್ಷ''ವನ್ನು ಆಚರಿಸುವಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೂ ಹಾಗೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಲುವಾಗಿ ಪ್ರತಿ ಇಲಾಖೆಗೆ ಆಡಳಿತ ಭಾಷಾ ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದೆಂದು ಸುತ್ತೋಲೆ ಕ್ರಮಾಂಕ ಡಿಪಿ.ಎ.ಆರ್. 54 ಪಿ.ಒ.ಎಲ್ 79 ದಿನಾಂಕ 4ನೇ ಡಿಸೆಂಬರ್ 1979ರಲ್ಲಿ ಆದೇಶ ನೀಡಲಾಗಿದೆ.

(2) 1978ರ ಮಾರ್ಚಿ ತಿಂಗಳ ದಿನಾಂಕ 1ರಿಂದ 3ರವರೆಗೆ ನವದೆಹಲಿಯಲ್ಲಿ ಸಮಾವೇಶಗೊಂಡಿದ್ದ ಅಖಿಲ ಭಾರತ ರಾಜಭಾಷಾ ಸಮ್ಮೇಳನವು ಆಯಾ ರಾಜ್ಯದ ಪ್ರಾದೇಶಿಕ ಭಾಷೆಯನ್ನು ಆ ರಾಜ್ಯದ ಆಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ. ಈ ಶಿಫಾರಸುಗಳ ಬಗ್ಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ತೀರ್ಮಾನ ತೆಗೆದುಕೊಂಡು ಸದರಿ ಶಿಫಾರಸುಗಳನ್ನು ರಾಜ್ಯ ಸರ್ಕಾರಗಳು ಜಾರಿಗೆ ತರಬೇಕೆಂದು ತನ್ನ ಪತ್ರ ದಿನಾಂಕ 23ನೇ ಅಕ್ಟೋಬರ್ 80ರಲ್ಲಿ ಸೂಚನೆ ನೀಡಿದೆ.

(3) ಈ ಮೇರೆಗೆ ಅಖಿಲ ಭಾರತ ರಾಜಭಾಷಾ ಸಮ್ಮೇಳನದ ಶಿಪಾರಸುಗಳನ್ನು ರಾಜ್ಯದಲ್ಲಿ ಜಾರಿಪಡಿಸುವ ಬಗ್ಗೆ ಚರ್ಚಿಸುವುದಕ್ಕಾಗಿ ದಿನಾಂಕ 29ನೇ ಆಗಸ್ಟ್ 1981ರಂದು ಮುಖ್ಯ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದ ರಾಜ್ಯಮಟ್ಟದ ಅಧಿಕಾರಿ ಸಮಿತಿಯು ಸಹ ಈ ಶಿಫಾರಸುಗಳನ್ನು ಜಾರಿಗೆ ತರಲು ಒಪ್ಪಿಗೆ ನೀಡಿದೆ.

(4) ರಾಜ್ಯ ಮಟ್ಟದ ಅಧಿಕಾರಿ ಸಮಿತಿಯ ತೀರ್ಮಾನದ ಮೇರೆಗೆ ರಾಜ್ಯ ಸರ್ಕಾರ ಎಲ್ಲ ಇಲಾಖೆಯ ಮುಖ್ಯಸ್ಥರು ತಮ್ಮ ಆಡಳಿತಕ್ಕೆ ಅಧೀನಕ್ಕೊಳಪಡುವ ಕಚೇರಿಗಳಿಗೆ ತನಿಖೆಗಾಗಿ ಹೋದ ಸಂದರ್ಭದಲ್ಲಿ ಆ ಕಚೇರಿಗಳ ದೈನಂದಿನ ಆಡಳಿತಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳಲ್ಲಿ ಕನ್ನಡವನ್ನು ಸರ್ಕಾರದ ಆದೇಶಗಳಿಗನುಸಾರವಾಗಿ ಬಳಸುತ್ತಿದ್ದಾರೆಯೇ ಎಂಬ ಬಗ್ಗೆ ತನಿಖೆಯನ್ನು ತಪ್ಪದೆ ನಡೆಸಬೇಕೆಂದು ಸರ್ಕಾರ ಈ ಮೂಲಕ ಎಲ್ಲ ಇಲಾಖಾ ಮುಖ್ಯಸ್ಥರಿಗೂ ಆದೇಶ ನೀಡಿದೆ. ಈ ಮೇಲಿನಂತೆ ತನಿಖೆ ನಡೆಸಿ ಕನ್ನಡವನ್ನು ಆಡಳಿತ ವ್ಯವಹಾರದಲ್ಲಿ ಬಳಸುತ್ತಿರುವ ವಿಷಯವನ್ನು ಅವರ ತನಿಖಾ ವರದಿಯಲ್ಲಿ ನಮೂದಿಸಿ ಈ ವರದಿಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರವರಿಗೆ ತಪ್ಪದೆ ಕಾಲ ಕಾಲಕ್ಕೆ ಕಳುಹಿಸಬೇಕೆಂದೂ ಸಹ ಆದೇಶಿಸಲಾಗಿದೆ.

(5) ಸರ್ಕಾರದ ಎಲ್ಲ ಕಾರ್ಯದರ್ಶಿಗಳವರು, ಅವರ ಆಡಳಿತ ನಿಯಂತ್ರಣಕ್ಕೊಳಪಡುವ ಎಲ್ಲ ಇಲಾಖಾ ಮುಖ್ಯಸ್ಥರುಗಳು ಸ್ವಾಯತ್ತ ಸಂಸ್ಥೆಗಳು ಬೋರ್ಡುಗಳು, ಕಾರ್ಪೊರೇಷನ್‌ಗಳು, ಸ್ಥಳೀಯ ಸಂಸ್ಥೆಗಳು, ಪುರಸಭೆಗಳು,

ಸರ್ಕಾರಿ ಕಾರ್ಖಾನೆಗಳು ಮುಂತಾದ ಆಡಳಿತ ವರ್ಗದವರಿಗೆ ಈ ದಿಶೆಯಲ್ಲಿ ಸೂಕ್ತ ಆದೇಶವನ್ನು ನೀಡಬೇಕೆಂದು ಆಶಿಸಲಾಗಿದೆ.

(6) ನಾಡು ನುಡಿಯಲ್ಲಿ ರಾಜ್ಯದ ಆಡಳಿತ ಸೂತ್ರವನ್ನು ನಡೆಸುವುದು ಪ್ರತಿಯೊಬ್ಬ ಅಧಿಕಾರಿ, ನೌಕರರ ಕರ್ತವ್ಯವೆಂದು ಪರಿಗಣಿಸಿ ರಾಜಭಾಷೆಯನ್ನು ಆಡಳಿತದಲ್ಲಿ ಬಳಕೆಗೆ ತರಲು ಪ್ರತಿಯೊಬ್ಬರೂ ಸಹಕರಿಸಬೇಕೆಂದೂ ವಿನಂತಿಸಲಾಗಿದೆ.

ಸಹಿ/-

**(ಎನ್. ನರಸಿಂಹರಾವ್)**

ಮುಖ್ಯ ಕಾರ್ಯದರ್ಶಿ.